ರಾತ್ರಿ ನಿಧಾನವಾಗಿ ಇಳಿಯುತ್ತಿತ್ತು. ಕತ್ತಲು ಮರಗಳ ಕೊಂಬೆಗಳಿಂದ ತಪ್ಪಿಸಿಕೊಂಡು ಕೈತೋಟವನ್ನು ಕವಿದುಕೊಂಡಿತು. ರೇವತಿ ತಲೆಯನ್ನು ಹಿಂದೆ ಬಾಗಿಸಿ ಆಕಾಶವನ್ನು ನೋಡಿದಳು. ಸಂಜೆಯ ಒಂಟಿ ನಕ್ಷತ್ರ ಪ್ರಕಾಶಮಾನವಾಗಿ ಹೊಳೆಯುತ್ತಿತ್ತು. ಅವಳಿಗೆ ಅದರಿಂದ ತನ್ನ ಕಣ್ಣು ಕೀಳಲಾಗಲಿಲ್ಲ. ಅದು ಬೆಳೆದು ಬೆಳೆದು ಬೆಳೆದು ಇನ್ನಷ್ಟು ದೊಡ್ಡದಾಗಿ, ಇನ್ನಷ್ಟು ಪ್ರಕಾಶಮಾನವಾಗಿ ಇಡೀ ಆಕಾಶವನ್ನು ಆಕ್ರಮಿಸಿಕೊಂಡಿತು! ಅವಳ ಪ್ರೀತಿಯ ಅಮ್ಮ ಅದರ ಹೃದಯದಲ್ಲಿದ್ದಳು; ಅವಳ ಮುಖ ವಾತ್ಸಲ್ಯದಿಂದ, ಕರುಣೆಯಿಂದ ಬೆಳಗುತ್ತಿತ್ತು; ಅವಳ ತೋಳುಗಳು ಬರಮಾಡಿಕೊಳ್ಳುವಂತೆ ರೇವತಿಯತ್ತ ಚಾಚಿಕೊಂಡಿದ್ದವು. ರೇವತಿ ಭಾವನೆಗಳ ಸೆಳೆತಕ್ಕೆ ಸಿಕ್ಕಿದಳು. ಬೆಳಕಿನ ಎರಡು ಕಿರಣಗಳು ಅವಳ ಕಣ್ಣುಗಳನ್ನು ಕುಕ್ಕಿ ಅವಳ ಎದೆಯತ್ತ ಸಾಗಿದವು. ಅವಳು ತೀರ ಪ್ರಯಾಸದಿಂದ ಎಳೆದು ಎಳೆದು ಬಿಡುತ್ತಿದ್ದ ಉಸಿರು ರಾತ್ರಿಯ ನೀರವವನ್ನು ಕದಡುತ್ತಿತ್ತು. ಮೇಲುಬ್ಬಸದಿಂದ ಉಸಿರು ಕಟ್ಟಿದಂತಾಗಿ ಎರಡು ಬಾರಿ ತನ್ನ ಅಮ್ಮನನ್ನು ಕೂಗಿದಳು. ಎಲ್ಲೆಡೆ ನಿಶ್ಶಬ್ದ. ಅಜ್ಜಿ ಮನೆಯೆಲ್ಲ, ಅಂದರೆ ನಡುಮನೆಯಿಂದ ಅಂಗಳಕ್ಕೆ, ಆಮೇಲೆ ಭತ್ತ ತೂರುವ ಷೆಡ್ಡಿಗೆ ಅಂತ ತೆವಳಿಕೊಂಡು ಹೋದಳು. ಆದರೆ, ಎಲ್ಲಿಯೂ ರೇವತಿಯ ಸುಳಿವಿಲ್ಲ. ಹುಡುಗಿಗೆ ಜ್ವರ ಬಿಟ್ಟು ಅವಳು ಹಿತ್ತಿಲಲ್ಲಿ ಓಡಾಡುತ್ತಿರಬಹುದೆನ್ನಿಸಿತು.

'ರೇವತೀ! ರೇವೀ! ಎಲ್ಲಿ ಹೋದೆಯೇ ಹಾಳಾದವಳೇ!' ಎಂದು ಚೀರಿದಳು.

ಆಮೇಲೆ ಒಂದು ಮಾರು ಅಗಲವಿದ್ದ, ಎತ್ತರದ, ತುಂಬ ಇಕ್ಕಟ್ಟಾದ ವರಾಂಡಾಕ್ಕೆ ತೆವಳಿಕೊಂಡು ಹೋದ ಅವಳು ಹುಡುಗಿಯ ಮೇಲೆ ಬಿದ್ದು 'ಇಲ್ಲಿ ಕೂತಿದ್ದೀಯಾ? ಸಾಯಿ ಸಾಯಿ' ಎಂದು ಕೂಗಿದಳು. ಹುಡುಗಿಯನ್ನು ಹಿಡಿದು ಅಲ್ಲಾಡಿಸಬೇಕೆನ್ನಿಸಿತು. ಆದರೆ, ಅದೇ ಕಾಲಕ್ಕೆ ಏನೋ ಹೆಚ್ಚುಕಮ್ಮಿಯಾಗಿದೆಯೆಂದೂ ಅನ್ನಿಸಿತು.

ಹುಡುಗಿಯ ದೇಹದುದ್ದಕ್ಕೂ ತನ್ನ ಕೈಯನ್ನು ಆಡಿಸಿದಳು. ಆಮೇಲೆ ಅವಳ ಮೂಗಿನ ಹೊಳ್ಳೆಗಳ ಮೇಲೆ ಎರಡು ಬೆರಳಿಟ್ಟಳು. ಕೂಡಲೇ ಅವಳ ಭೀಕರ ಗೋಳಾಟ ರಾತ್ರಿಯ ನೀರವವನ್ನು ಸೀಳಿತು. ಎರಡು ದೇಹಗಳು ವರಾಂಡಾದಿಂದ ಧೊಪ್ಪೆಂದು ಕೆಳಗೆ ಬಿದ್ದವು.

ಹೀಗೆ ಶ್ಯಾಮಬಂಧು ಮೊಹಂತಿಯವರ ಕುಟುಂಬ ಕೊನೆಗೊಂಡಿತು.

ಅವರ ಮನೆಯಿಂದ ಕೇಳಿಬಂದ ಕೊನೆಯ ಮಾತುಗಳು: 'ರೇವತೀ! ರೇವೀ! ಎಲ್ಲಿ ಹೋದೆಯೇ ಹಾಳಾದವಳೇ'.

## ಎಸ್. ದಿವಾಕರ್

ಬೆಂಗಳೂರು ಜಿಲ್ಲೆಯ ಸೋಮತ್ತನಹಳ್ಳಿಯಲ್ಲಿ ಹುಟ್ಟಿದ ದಿವಾಕರ್ ತಮ್ಮ ಅನನ್ಯ ಬರವಣಿಗೆಯಿಂದ ಕನ್ನಡ ಓದುಗರ ಪ್ರೀತಿಗೆ ಪಾತ್ರರಾದವರು. ಪ್ರಕಟಿತ ಕೃತಿಗಳು: 'ಇತಿಹಾಸ', 'ಎಲ್ಲಬಲ್ಲವರಿಲ್ಲ ಈ ಊರಿಲ್ಲಿ', 'ಆಯ್ದ ಕತೆಗಳು' (ಕಥಾಸಂಕಲನಗಳು), 'ಆತ್ಮಚರಿತ್ರೆಯ ಕೊನೆಯ ಪುಟ','ಸೋತ ಕಣ್ಣುಗಳನ್ನು ಮಿಟುಕಿಸುವ ಮಧ್ಯಾಹ್ನ', 'ವಿಧಾನಸಭೆಯಲ್ಲೊಂದು ಹಕ್ಕಿ' (ಕವನ ಸಂಕಲನಗಳು), 'ನಾಪತ್ತೆಯಾದ ಗ್ರಾಮಾಫೋನು', 'ಕೃಷ್ಣಲೀಲೆಯಿಂದ ರಾಮರಾಜ್ಯಕ್ಕೆ', 'ಸರ್ವ ಜನಾಂಗದ ಶಾಂತಿಯ ಭಾಷೆ' (ಪ್ರಬಂಧಗಳು), 'ಪ್ರಪಂಚ ಪುಸ್ತಕ' (ವಿಮರ್ಶಾ ಲೇಖನಗಳು), 'ಪಂಡಿತ ಭೀಮಸೇನ ಜೋಶಿ' (ವ್ಯಕ್ತಿಚಿತ್ರ), 'ಕಥಾಜಗತ್ತು', 'ಜಗತ್ತಿನ ಅತಿ ಸಣ್ಣಕತೆಗಳು', 'ಉತ್ತರ ದಕ್ಷಿಣ ದಿಕ್ಕುಗಳನ್ನು ಬಲ್ಲವನು', 'ಹಾರಿಕೊಂಡು ಹೋದವನು' (ಅನುವಾದಿತ ಕಥೆಗಳು), 'ವೆನಿಸ್ಸಿನಲ್ಲಿ ಸಾವು', 'ಹಳ್ಳಿ', 'ಪೋಸ್ಟ್‌ಮ್ಯಾನ್' (ಅನುವಾದಿತ ಕಾದಂಬರಿಗಳು). ದಿವಾಕರ್ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.